ಹೋಗುವ ಸ್ನಾನಘಟ್ಟದ ಎರಡೂ ಬದಿಗಳಲ್ಲಿ ಆರು ಆರು ಶಿವಲಿಂಗಗಳಿವೆ. ಶ್ರೀರಾಮಕೃಷ್ಣರು ಈ ಸ್ನಾನಘಟ್ಟದ ಮೂಲಕವೇ ಸ್ನಾನಕ್ಕಾಗಿ ಗಂಗೆಯ ಕಡೆಗೆ ಹೋಗುತ್ತಿದ್ದರು. ತಮ್ಮ ಅದ್ವೈತ ಸಾಧನೆಯ ಗುರುವಾದ ತೋತಾಪುರಿಯನ್ನು ಅವರು ಮೊದಲ ಸಲ ಭೇಟಿಮಾಡಿದ್ದು ಕೂಡ ಈ ಸ್ನಾನಘಟ್ಟದಲ್ಲಿಯೇ.

ಈ ಅಂಗಣದ ಮಧ್ಯಭಾಗದಲ್ಲಿ ಎರಡು ದೇವಸ್ಥಾನಗಳಿವೆ. ದಕ್ಷಿಣ ಭಾಗದಲ್ಲಿದ್ದು, ದಕ್ಷಿಣಕ್ಕೆ ಮುಖಮಾಡಿರುವ ದೊಡ್ಡ ದೇಗುಲವೇ ಕಾಳೀ ಮಂದಿರ. ಅದರ ಪಕ್ಕದಲ್ಲಿರುವ ಸಣ್ಣ ಮಂದಿರವು ರಾಧೆ ಮತ್ತು ಕೃಷ್ಣರಿಗೆ ಸಮರ್ಪಿತವಾದುದು. ಕಾಳೀ ಮಾತೆಯ ಮಂದಿರದ ಮುಂದುಗಡೆ, ಅಗಲವಾದ ನಾಟ್ಯಮಂದಿರ ಅಥವಾ ಪ್ರಾರ್ಥನಾಮಂದಿರವಿದೆ.

### ಕಾಳೀ ದೇವಸ್ಥಾನ

ಮುಖ್ಯವಾದ ಮಂದಿರವು 'ಭವತಾರಿಣಿ' ಎಂದು ಕರೆಯಲ್ಪಡುವ ಜಗನ್ಮಾತೆಗೆ ನಿವೇದಿತವಾಗಿದೆ. ಆದರೆ ರಾಣಿ ರಾಸಮಣಿಯು ತಯಾರಿಸಿದ ಮೂಲ ಟ್ರಸ್ಟಿಗಳ ಡೀಡ್‌ನಲ್ಲಿ ಈ ದೇವಿಯನ್ನು 'ಶ್ರೀಶ್ರೀ ಜಗದೀಶ್ವರಿ ಮಹಾಕಾಳಿ' ಎಂದು ಹೆಸರಿಸಲಾಗಿದೆ. ಭವತಾರಿಣಿ ಎಂಬ ಹೆಸರು ಯಾವಾಗ ಬಂತು ಎನ್ನುವುದು ತಿಳಿದುಬಂದಿಲ್ಲ. 'ಶ್ರೀರಾಮಕೃಷ್ಣ ವಚನವೇದ'ದ ಮೊದಲ ಅಧ್ಯಾಯದಲ್ಲಿ 'ಭವತಾರಿಣಿ' ಎಂಬ ಹೆಸರು ಕಂಡುಬರುತ್ತದೆ. ಭವತಾರಣಿ ಎಂದರೆ, 'ಭವ' ಎಂದರೆ ಸಂಸಾರದಿಂದ 'ತಾರಿಣಿ' ಎಂದರೆ ಪಾರುಮಾಡುವವಳು. ಬಂಗಾರದ ಆಭರಣಗಳಿಂದ ಅಲಂಕೃತವಾದ ಬಸಾಲ್ಟ್‌ನಿಂದ ಮಾಡಿದ ಜಗನ್ಮಾತೆಯ ವಿಗ್ರಹವು ಆಕೆಯ ದಿವ್ಯಸಂಗಾತಿಯಾದ ಶಿವನ ಅಮೃತಶಿಲೆಯ ವಿಗ್ರಹದ ಮೇಲೆ ನಿಂತಿರುವುದನ್ನು ಕಾಣಬಹುದು. ಭಗವಂತನ ನಿರ್ಗುಣ ಸ್ವರೂಪವನ್ನು ಪ್ರತಿನಿಧಿಸುವ ಶಿವನು ತನ್ನ ಮುಖವನ್ನು ಮೇಲಕ್ಕೆ ಎತ್ತಿಕೊಂಡು ಮಲಗಿಕೊಂಡಿದ್ದಾನೆ.

ಈ ಭವತಾರಿಣಿ ದೇವಿಯ ಸಮ್ಮುಖದಲ್ಲಿಯೇ ಕಾಮಾರಪುಕುರ ಗ್ರಾಮದ ಬಾಲಕನಾದ ಗದಾಧರನು, ಜಗನ್ಮಾನ್ಯರಾದ ಶ್ರೀರಾಮಕೃಷ್ಣರಾಗಿ ಅರಳಿ ನಿಂತದ್ದು. ೧೮೫೬ ರಲ್ಲಿ ಶ್ರೀರಾಮಕೃಷ್ಣರು ತಾಯಿ ಕಾಳಿಯನ್ನು ಆರಾಧಿಸುವ ಜವಾಬ್ದಾರಿಯನ್ನು ಹೊತ್ತುಕೊಂಡರು. ಜಗನ್ಮಾತೆಗೆ ಸಂಬಂಧಿಸಿದಂತೆ ಅವರಿಗೆ ಉಂಟಾದ ದರ್ಶನಗಳಿಗೆ ಬೇರೆ ಸಾಟಿಯೇ ಇಲ್ಲ ಎಂದು ಹೇಳಬೇಕು. ಜಗನ್ಮಾತೆಯು ಶ್ರೀರಾಮಕೃಷ್ಣರನ್ನು ತನ್ನ ಸಾಧನವನ್ನಾಗಿ ಮಾಡಿಕೊಂಡು ಆಡಿದ ದಿವ್ಯಲೀಲೆಗಳು ಭಕ್ತರ ಧ್ಯಾನಕ್ಕೆ ಅದ್ಭುತ ವಿಷಯಗಳಾಗಬಲ್ಲುವು. ಭಗವಂತನು ಮಾನವರೂಪವನ್ನು ತಳೆದು, ಮಾನವನ ಜೊತೆ ಆಡುತ್ತಾನೆ; ಅವರನ್ನು ದೇವರ ಮಾರ್ಗದಲ್ಲಿ ಮುನ್ನಡೆಸುತ್ತಾನೆ ಎನ್ನುವುದು, ಈ ದೇವಮಂದಿರದಲ್ಲಿಯೇ, ಶ್ರೀರಾಮಕೃಷ್ಣರ ವಿಶಿಷ್ಟ ಜೀವನದ ರೂಪದಲ್ಲಿ ಸಾಬೀತಾಯಿತು. ಅವರು ತಾವು ಮೊಟ್ಟಮೊದಲು ಪಡೆದ ಜಗನ್ಮಾತೆಯ ದರ್ಶನದ ಬಗ್ಗೆ ಏನು ಹೇಳುತ್ತಾರೆ ಎನ್ನುವುದನ್ನು ಅವರಿಂದಲೇ ಕೇಳೋಣ: "ದೇವಿಯ ದರ್ಶನವಾಗಲಿಲ್ಲವಲ್ಲಾ ಎಂದು ನನ್ನ ಹೃದಯದಲ್ಲಿ ಅಸಹ್ಯವಾದ ವೇದನೆ ಉಂಟಾಗುತ್ತಿತ್ತು. ನೀರನ್ನು ತೆಗೆಯುವುದಕ್ಕೆ ಟವಲನ್ನು ಹಿಂಡುತ್ತಾರಲ್ಲ, ಹಾಗೆ ಯಾರೋ ನನ್ನ ಹೃದಯವನ್ನು ಹಿಂಡಿದಂತಾಗುತ್ತಿತ್ತು. ತಾಯಿಯ ದರ್ಶನ ನನಗೆಂದೂ ಆಗುವುದೇ



ಇಲ್ಲ ಎಂದು ಭಾವಿಸಿ, ನನ್ನ ಹೃದಯ ತೀವ್ರ ವೇದನೆಯಿಂದ ಚಡಪಡಿಸುತ್ತಿತ್ತು. ಅಸ್ಥಿರನಾಗಿ ಇನ್ನು ಜೀವಿಸಿದ್ದು ಪ್ರಯೋಜನವಿಲ್ಲ ಎಂದು ಚಿಂತಿಸತೊಡಗಿದೆ. ಗರ್ಭಗುಡಿಯಲ್ಲಿ ಒಂದು ಕತ್ತಿ ಇತ್ತು. ನನ್ನ ದೃಷ್ಟಿ ಕೂಡಲೇ ಅದರ ಮೇಲೆ ಬಿತ್ತು. ಇದರಿಂದಲೇ ಈ ಜೀವನವನ್ನು ಮುಗಿಸಿಬಿಡುತ್ತೇನೆಂದು ಹುಚ್ಚನಂತೆ ಓಡಿ ಅದನ್ನು ತೆಗೆದುಕೊಳ್ಳುವಷ್ಟರಲ್ಲಿ ತಾಯಿಯ ಅದ್ಭುತ ದರ್ಶನವಾಯಿತು; ಪ್ರಜ್ಞಾಶೂನ್ಯನಾಗಿ ಕೆಳಗೆ ಬಿದ್ದೆ. ಅನಂತರ ಹೊರಗಡೆ ಏನು ನಡೆಯುತ್ತಿದೆ, ಅಂದು ಮತ್ತು ಮರುದಿನ ಹೇಗೆ ಕಳೆದುಹೋಯಿತು – ಇದೊಂದೂ ನನಗೆ ತಿಳಿಯಲಿಲ್ಲ. ಆದರೆ ಒಳಗೆ ಹಿಂದೆಂದೂ ಅನುಭವಿಸದ ಅದ್ಭುತ ಆನಂದ ಪ್ರವಾಹ ಹರಿಯುತ್ತಿತ್ತು. ತಾಯಿಯ ದಿವ್ಯಜ್ಯೋತಿಯನ್ನು ನಾನು ಕಂಡೆ."

ಈ ಮೇಲಿನ ದರ್ಶನದ ವಿಷಯವನ್ನು ಇನ್ನೊಂದು ಸಂದರ್ಭದಲ್ಲಿ ಶ್ರೀರಾಮಕೃಷ್ಣರು ಈ ರೀತಿ ವಿವರಿಸುತ್ತಾರೆ: "ಮನೆ, ಬಾಗಿಲು, ಮಂದಿರ ಎಲ್ಲವೂ ಮಾಯವಾದುವು –ಎಲ್ಲೂ ಏನೂ ಕಾಣುತ್ತಿಲ್ಲ. ಕೇವಲ ಅಸೀಮ ಅನಂತ ಜ್ಯೋತಿಯ ಸಮುದ್ರವೊಂದೇ ಕಾಣುತ್ತಿದೆ. ಎಲ್ಲಿ ನೋಡಿದರೂ, ಎಷ್ಟೇ ದೂರ ಕಣ್ಣು ಹಾಯಿಸಿದರೂ ನಾಲ್ಕೂ ಕಡೆಯೂ ಅದರ ಉಜ್ಜ್ವಲ ಜ್ವಾಲಮಾಲೆಯು ಭೋರ್ಗರೆಯುತ್ತ, ಎಲ್ಲವನ್ನೂ ನುಂಗಿಹಾಕುವಂತೆ ಮುನ್ನುಗ್ಗುತ್ತಿತ್ತು. ನೋಡನೋಡುತ್ತಿದ್ದಂತೆಯೇ ಅದು ನನ್ನ ಮೇಲೆ ಎರಗಿ ನನ್ನನ್ನು ಎಲ್ಲಿಯೋ ಮುಳುಗಿಸಿಬಿಟ್ಟಿತು. ನಾನು ಏಳುತ್ತ ಮುಳುಗುತ್ತ, ಪ್ರಜ್ಞಾಶೂನ್ಯನಾಗಿ ಬಿದ್ದುಬಿಟ್ಟೆ.

ಆ ಅವಸ್ಥೆಯ ನಂತರ ವರಾಭಯಕರ ಚಿನ್ಮಯಮೂರ್ತಿಯನ್ನು ಸದಾ ನೋಡುತ್ತಿದ್ದೆ. ಆ ಮೂರ್ತಿ ನಗುವುದನ್ನೂ, ಮಾತನಾಡುವುದನ್ನೂ, ನನಗೆ ಸಾಂತ್ವನ ನೀಡುವುದನ್ನೂ ಕಾಣುತ್ತಿದ್ದೆ."

(*ಶ್ರೀರಾಮಕೃಷ್ಣ ಲೀಲಾಪ್ರಸಂಗ*, ಪುಟ ೧೪೭–೧೪೯)

(ಮುಂದುವರಿಯುವುದು)